# ಶ್ರೀಖಂಡ್ ಮಹಾದೇವ - ಒಂದು ಸಾಹಸ ಯಾತ್ರೆ

**ನವೀನ್ ಸಿ.ಕೆ.**

ಕೆಲವು ಬಗೆಯ ಯಾತ್ರೆಗಳನ್ನು 'ಸಾಹಸಯಾತ್ರೆ' ಎಂದೂ ಕರೆಯಬಹುದು. ಇದನ್ನು ಕೈಗೊಳ್ಳಲು ಎದೆಗಟ್ಟಿ ಇರಬೇಕು. ಹಿಮಾಚಲ ಪ್ರದೇಶದಲ್ಲಿರುವ ಅಂತಹ ಒಂದು ಪವಿತ್ರ ತಾಣವೇ ಶ್ರೀಖಂಡ ಮಹಾದೇವ. ಈ ಯಾತ್ರೆಯ ಅನುಭವಗಳನ್ನು ವಿವರಿಸಿರುವ ಲೇಖಕರು ಮೈಸೂರು ಆಶ್ರಮದ ಭಕ್ತರು. ಯುವಚೇತನ ಶಿಬಿರಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವ ಅವರು ಉತ್ತಮ ಸಾಹಿತ್ಯಾಸಕ್ತರೂ ಹೌದು. ಇಂಗ್ಲಿಷ್‌ನಲ್ಲಿ ಅವರು ಸ್ವಾಮಿ ವಿವೇಕಾನಂದರ ಉಪದೇಶಗಳನ್ನು ಸಂಕಲನ ಮಾಡಿ, 'Be One With God' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. ವೃತ್ತಿಯಲ್ಲಿ ಅವರು ಕಂಪ್ಯೂಟರ್ ಸಂಸ್ಥೆಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಜಗತ್ತಿನ ಅತ್ಯಂತ ಸುಂದರ ದೃಶ್ಯಗಳನ್ನು ಹಿಮಾಲಯದ ಎತ್ತರದಲ್ಲಿ ನೋಡಬಹುದೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಸ್ವಾಮಿ ವಿವೇಕಾನಂದರು ಹಿಮಾಲಯ ಪರ್ವತಗಳ ಬಗ್ಗೆ ನೀಡಿರುವ ವರ್ಣನೆ ಮತ್ತು ಅಲ್ಲಿಗೆ ಹೋಗುವುದರಿಂದ ನಮ್ಮ ದೇಹ ಮತ್ತು ಮನಸ್ಸಿನ ಮೇಲೆ ಉಂಟಾಗುವ ಉತ್ತಮ ಪರಿಣಾಮಗಳನ್ನು ಕುರಿತು ಓದಿದ ಮೇಲೆ ಹಿಮಾಲಯಕ್ಕೆ ಹೋಗದಿರುವುದು ಬಹಳ ಕಷ್ಟ. ಕೈಲಾಸ ಪರ್ವತ, ಅಮರನಾಥ, ಕೇದಾರನಾಥ, ತುಂಗನಾಥ, ಇವು ಸಾಮಾನ್ಯವಾಗಿ ಹೆಚ್ಚು ಜನರಿಗೆ ತಿಳಿದಿರುವ ಹಿಮಾಲಯದಲ್ಲಿರುವ ಶಿವನ ಪ್ರಮುಖ ಆವಾಸ ಸ್ಥಾನಗಳು. ಆದರೆ ಅನೇಕ ಜನರಿಗೆ ತಿಳಿಯದಿರುವ ಹಿಮಾಚಲ ಪ್ರದೇಶದಲ್ಲಿರುವ ಶ್ರೀಖಂಡ್ ಮಹಾದೇವ ಇವೆಲ್ಲಕ್ಕಿಂತ ಹೆಚ್ಚು ಕಷ್ಟಕರವಾದ ಯಾತ್ರೆ. ಸಮುದ್ರ ಮಟ್ಟದಿಂದ ಸುಮಾರು ೧೮,೦೦೦ ಅಡಿ ಮೇಲಿರುವ ಮತ್ತು ಒಂದು ಕಡೆಯಿಂದ ಸುಮಾರು ೩೫ ರಿಂದ ೪೦ ಕಿಲೋಮೀಟರ್ ದೂರ ಕಠಿಣ ಚಾರಣ ಮಾಡಿ ತಲುಪಬೇಕಾಗಿರುವ ಈ ಕ್ಷೇತ್ರವನ್ನು, ಭಾರತದಲ್ಲಿ ತಲುಪಲು ಅತ್ಯಂತ ಕಷ್ಟಕರವಾಗಿರುವ ತೀರ್ಥಸ್ಥಾನವೆಂದು ಹೇಳುತ್ತಾರೆ. ಇದು ಪಂಚ ಕೈಲಾಸಗಳಲ್ಲಿ ಒಂದು. ಆದ್ದರಿಂದ ಪಂಚಕೈಲಾಸ ಯಾತ್ರೆ ಕೈಗೊಳ್ಳುವವರು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ.



ಶ್ರೀಖಂಡ್ ಮಹಾದೇವ ಯಾತ್ರೆ ಮಾಡಬೇಕೆಂಬುದು ನನ್ನ ಸುಮಾರು ನಾಲ್ಕು ವರ್ಷಗಳ ಕನಸಾಗಿತ್ತು. ೨೦೨೦ ರಲ್ಲಿ ಟಿಕೆಟ್ ಕೂಡ ಬುಕ್ ಮಾಡಿದ್ದೆ. ಆದರೆ ಕೊರೋನ ಸಮಸ್ಯೆಯಿಂದಾಗಿ ಯಾತ್ರೆಯನ್ನು ಸರ್ಕಾರ ಎರಡು ವರ್ಷ ಅಧಿಕೃತವಾಗಿ ರದ್ದುಗೊಳಿಸಿತ್ತು. ಆದರೂ ಅಲ್ಲಿನ ಕೆಲವು ಸ್ಥಳೀಯರು ಯಾತ್ರೆಯನ್ನು ಕೈಗೊಂಡಿದ್ದರು. ಆದರೆ ಅಲ್ಲಿನ ವ್ಯವಸ್ಥೆಗಳ ಕೊರತೆ ಮತ್ತು ಆ ಯಾತ್ರೆಗೆ ಬೇಕಾದ ದೈಹಿಕ ಮತ್ತು ಮಾನಸಿಕ ಕ್ಷಮತೆಗಳ ಕೊರತೆಯಿಂದಾಗಿ ಕೆಲವರು ಸಾವನ್ನಪ್ಪಿದ್ದರು. ಇದರಿಂದಾಗಿ ಹಿಮಾಚಲ ಪ್ರದೇಶದ ಸರ್ಕಾರವು ಈ ವರ್ಷದಿಂದ ಯಾತ್ರೆಯನ್ನು ಜಿಲ್ಲಾ ಆಡಳಿತದ ಸುಪರ್ದಿಗೆ ತಂದು, ಯಾತ್ರೆಗೆ ದಿನಾಂಕವನ್ನು ನಿಗದಿಪಡಿಸಿ ಮತ್ತು ಯಾತ್ರಿಕರ ನೊಂದಣಿ ಕ್ರಮವನ್ನು ಜಾರಿಗೊಳಿಸಿದೆ. ಅದಕ್ಕಾಗಿ ಒಂದು ವೆಬ್‌ಸೈಟ್‌ನ್ನು (https://shrikhandyatra.hp.gov.in/) ಕೂಡ ಮಾಡಲಾಗಿದೆ. ಈ ಯಾತ್ರೆಗೆ ವೈದ್ಯರ ಪ್ರಮಾಣ ಪತ್ರ ಆವಶ್ಯಕ ಮತ್ತು ೧೨ ವರ್ಷಕ್ಕೆ ಮೇಲ್ಪಟ್ಟ ಮತ್ತು ೬೦ ವರ್ಷಗಳ ಕೆಳಗಿನವರಿಗೆ ಮಾತ್ರ ಅವಕಾಶ. ನೊಂದಣಿ ಮತ್ತು ವೈದ್ಯಕೀಯ ಪ್ರಮಾಣಪತ್ರವನ್ನು ಯಾತ್ರೆಯನ್ನು ಶುರು ಮಾಡುವ ಸ್ಥಳದಲ್ಲಿಯೇ ಪಡೆಯಬಹುದು.

ಈ ಯಾತ್ರೆಗೆ ಸುಮಾರು ೧೦ಜನರು ಸಿದ್ಧವಿದ್ದರೂ ಹಿಮಾಚಲ ಸರ್ಕಾರವು ಯಾತ್ರಾ ದಿನಾಂಕವನ್ನು ನಿಗದಿಸುವುದನ್ನು ವಿಳಂಬಿಸಿದರು; ಮತ್ತು ಈ ಯಾತ್ರೆಯ ಕೆಲವು ವಿಡಿಯೋಗಳನ್ನು ನೋಡಿ ಈ ಯಾತ್ರೆ ಕಷ್ಟವೆಂದೆನಿಸಿ ಕೆಲವರು ಹಿಂದೆ ಸರಿದರು. ಕೊನೆಗೆ ನಾನು ಮತ್ತು ನನ್ನ ಸ್ನೇಹಿತರಾದ ರಘುರವರು ಹೇಗಾದರೂ ಈ ಯಾತ್ರೆಯನ್ನು ಮಾಡಿಯೇ ಬಿಡಬೇಕೆಂದು ಹೊರಟೆವು. ಈ ಯಾತ್ರೆಯ ಜೊತೆ ಇತರ ಯಾವುದೇ ತೀರ್ಥಸ್ಥಾನಗಳ

ಕಾರ್ಯಕ್ರಮವನ್ನು ಇಟ್ಟುಕೊಳ್ಳದೆ ಹತ್ತು ದಿನಗಳನ್ನು ಸಂಪೂರ್ಣ ಈ ಯಾತ್ರೆಗೆ ನಿಗದಿಪಡಿಸಿದೆವು. ಮೊದಲನೆಯ ದಿನ ವಾಯು ಮಾರ್ಗದಿಂದ ಬೆಂಗಳೂರಿನಿಂದ ಚಂಡೀಗಢ ತಲುಪಿ, ಅಲ್ಲಿಂದ ಬಸ್ ಹಿಡಿದು ಶಿಮ್ಲಾ ತಲುಪಿ ಅಲ್ಲಿಯ ರಾಮಕೃಷ್ಣ ಮಿಷನ್ ತಲುಪಿದೆವು. ಅಲ್ಲಿ ಕನ್ನಡದವರೇ ಆದ ಸ್ವಾಮಿ ದಿವ್ಯವಿದ್ಯಾನಂದರು ಇದ್ದುದು ನಮಗೆ ತುಂಬಾ ಅನುಕೂಲವಾಯಿತು. ನಾವು ಅಲ್ಲಿಗೆ ತಲುಪಿದಾಗ ಕೋಲ್ಕತ್ತದ ಸ್ವಾಮೀಜಿಯೊಬ್ಬರು ಶ್ರೀಖಂಡ್ ಮಹಾದೇವನ ದರ್ಶನಕ್ಕೆ ಹೋಗಿರುವ ವಿಷಯ ತಿಳಿಯಿತು. ಈ ಯಾತ್ರೆಯು ತುಂಬಾ ಕಠಿಣವೆಂದು ನಮಗೆ ಆಗಲೇ ತಿಳಿದಿದ್ದರಿಂದ ಸ್ವಾಮೀಜಿಯವರು ಹಿಂದಿರುಗಿದ ಮೇಲೆ ಅವರ ಮಾರ್ಗದರ್ಶನವನ್ನು ಪಡೆಯೋಣವೆಂದು ನಿರ್ಧರಿಸಿದೆವು. ಶಿಮ್ಲಾ ನಗರವು ಹಿಮಾಚಲ ಪ್ರದೇಶದ ರಾಜಧಾನಿ. ಅತ್ಯಂತ ಚೊಕ್ಕ ಮತ್ತು ಅತಿ ಸುಂದರ. ಮನಸ್ಸಿಗೆ ಮುದ ನೀಡುವ ಆಹ್ಲಾದಕರ ವಾತಾವರಣ ಮತ್ತು ಶಾಂತರಾಗಿರುವ ಜನರು. ನನಗಂತೂ ಶಿಮ್ಲಾ ತುಂಬಾ ಹಿಡಿಸಿತು.

ಮುಂದಿನ ದಿನ ಶಿಮ್ಲಾದಲ್ಲಿಯೇ ಇರುವ ಒಂದು ಬೆಟ್ಟದ ಮೇಲಿರುವ ತುಸು ಕಠಿಣವೆಂದೇ ಹೇಳಬಹುದಾದ ಜಾಕೂ ಹನುಮಾನ್ ದೇವಸ್ಥಾನಕ್ಕೆ ನಡೆದುಕೊಂಡೇ ಹೊರಟೆವು. ಒಂದು ರೀತಿ ಇದು ಶ್ರೀಖಂಡ್ ಮಹಾದೇವ್ ಯಾತ್ರೆಗೆ ತಯಾರಿಯೆಂದೇ ಹೇಳಬಹುದು. ಈ ರೀತಿಯ ಚಿಕ್ಕ ಚಾರಣಗಳು ಮುಂದೆ ಮಾಡುವ ದೊಡ್ಡ ಮತ್ತು ಕಠಿಣ ಚಾರಣಗಳಿಗೆ ನಮ್ಮನ್ನು ಮಾನಸಿಕವಾಗಿ ಸಿದ್ಧಗೊಳಿಸುತ್ತವೆ. ಮಧ್ಯಾಹ್ನದ ಹೊತ್ತಿಗೆ ಹಿಂತಿರುಗಿ, ನಮಗೆ ಬೇಕಾದ ಸಣ್ಣಪುಟ್ಟ ವಸ್ತುಗಳನ್ನು ಕೊಂಡು ಸ್ವಾಮೀಜಿಯವರ ಆಗಮನವನ್ನು ಎದುರು ನೋಡಿದೆವು. ಸಾಯಂಕಾಲದ ಹೊತ್ತಿಗೆ ಸ್ವಾಮೀಜಿಯವರು ಶ್ರೀಖಂಡ ಯಾತ್ರೆಯಿಂದ ಹಿಂತಿರುಗಿದರು. ಅವರ ಆಶೀರ್ವಾದವನ್ನು ಪಡೆದು ಅವರಿಂದ ಯಾತ್ರೆಯ ಬಗ್ಗೆ ಮಾಹಿತಿಯನ್ನು ಪಡೆದೆವು. ಇದು ಸ್ವಲ್ಪ ಕಠಿಣ ಯಾತ್ರೆಯೇ ಆಗಿದ್ದರಿಂದ ನಾವು ಯಾವುದೇ ರೀತಿಯಲ್ಲಿಯೂ ಯಾವ ಅವಕಾಶವನ್ನು ತೆಗೆದುಕೊಳ್ಳದೆ ಎಲ್ಲ ಬಗೆಯ ಮಾಹಿತಿಯನ್ನು ಸ್ವಾಮೀಜಿಯವರಿಂದ ಪಡೆದೆವು. ಸುಮಾರು ೫೫ ವರ್ಷದವರಾದ ಸ್ವಾಮೀಜಿಯವರು ಸಾಕಷ್ಟು ಚಾರಣಗಳನ್ನು ಮಾಡಿದ್ದಾರೆ. ಅವರ ಅನುಭವ ಮತ್ತು ಮಾರ್ಗದರ್ಶನ ನಮಗೆ ಬಹಳ ಸಹಾಯ ಮಾಡಿತು.

ಮುಂದಿನ ದಿನ ಬೆಳಿಗ್ಗೆ ಆಶ್ರಮದಲ್ಲಿ ತಿಂಡಿ ತಿಂದು ಶಿಮ್ಲಾ ಬಸ್ ನಿಲ್ದಾಣದಿಂದ ಬಸ್ ಹಿಡಿದು ರಾಮಪುರ ತಲುಪಿದೆವು. ಇದು ಸುಮಾರು ಆರು ಗಂಟೆಗಳ ಪ್ರಯಾಣ. ಹಿಮಾಚಲ ಪ್ರದೇಶದ ರಸ್ತೆಗಳು ತಕ್ಕಮಟ್ಟಿಗೆ ಚೆನ್ನಾಗಿಯೇ ಇವೆ. ಈ ರಸ್ತೆಯಲ್ಲಿ ಸಾಕಷ್ಟು ಸೇಬಿನ ಹಣ್ಣಿನ ಗೋಡೌನ್‌ಗಳಿವೆ. ಹಾಗೆಯೇ ರಸ್ತೆಯ ಆಚೀಚೆ ಈ ಸೇಬು ಹಣ್ಣಿನ ಮರಗಳನ್ನು ಹೆಚ್ಚಾಗಿಯೇ ಕಾಣಬಹುದು. ರಾಮಪುರ ತಲುಪಿದ ನಂತರ ಅಲ್ಲಿಂದ ಜಾಒ ಗ್ರಾಮವನ್ನು ತಲುಪಬೇಕು. ಇಲ್ಲಿ ಬಸ್ ಬದಲಿಸಿ ಜಾಒ ಗ್ರಾಮದ ಸಮೀಪವಿರುವ ಬಸ್ ರಸ್ತೆ ಕೊನೆಗೊಳ್ಳುವ ಭೀಮ್‌ಬಲಿ ಎಂಬ ಗ್ರಾಮವನ್ನು ತಲುಪಿದೆವು. ಈ ರಸ್ತೆಯಲ್ಲಂತೂ ಸಾಕಷ್ಟು ಸೇಬಿನ ಮರಗಳು, ಸಾಧಾರಣ ಸೇಬು, ಮರದ ಸೇಬು ಇತ್ಯಾದಿ. ಬಸ್ ನಿಂದಲೇ ಕೈಹಾಕಿ ಕಿತ್ತುಕೊಳ್ಳುವಷ್ಟು ಹತ್ತಿರ. ಇಲ್ಲಿಂದ ಒಂದು ಶೇರ್ ಟ್ಯಾಕ್ಸಿ ಹಿಡಿದು ಜಾಒ ತಲುಪಿದೆವು. ಇಲ್ಲಿಗೆ ವಾಹನಗಳ ರಸ್ತೆ ಕೊನೆಗೊಳ್ಳುತ್ತದೆ. ಮುಂದೆ ಏನಿದ್ದರೂ ನಡೆಯಬೇಕು. ನಮ್ಮ ಮೊದಲ ಗುರಿ ಸಿಂಘಾಡ್ ತಲುಪುವುದಾಗಿತ್ತು. ಜಾಒ ನಲ್ಲಿಯೇ ಉಳಿದುಕೊಳ್ಳುವ ವ್ಯವಸ್ಥೆ ಇತ್ತಾದರೂ ಸಿಂಘಾಡ್ ಬೇಸ್ ಕ್ಯಾಂಪ್ ತಲುಪುವುದು ಉತ್ತಮವೆಂದೆನಿಸಿ ಸುಮಾರು ಎರಡು ಗಂಟೆಗಳ ಕಾಲ ನಡೆದು ಸಿಂಘಾಡ್ ತಲುಪಿದಾಗ ರಾತ್ರಿ ಸುಮಾರು ಎಂಟು ಗಂಟೆ. ಸಿಂಘಾಡ್ ಗ್ರಾಮದ ಜನತೆಯೆಲ್ಲಾ ಸೇರಿ ಯಾತ್ರಿಕರಿಗೆ ಅನುಕೂಲವಾಗುವಂತೆ ಉಚಿತ ಲಂಗರ್ ವ್ಯವಸ್ಥೆ ಮಾಡಿದ್ದರು. ಅಲ್ಲಿ ಊಟ ಮಾಡಿ ಅಲ್ಲಿಯೇ ಮಲಗಿದೆವು.

ಬೆಳಿಗ್ಗೆ ಸುಮಾರು ಐದು ಗಂಟೆಗೆ ಎದ್ದು ತಯಾರಾಗಿ ನಮ್ಮ ನೊಂದಣಿ ಪತ್ರವನ್ನು ತೋರಿಸಿ ಅಲ್ಲಿಂದ ಮುಂದೆ ಹೊರಟಾಗ ಸುಮಾರು ಏಳು ಗಂಟೆ. ನಮ್ಮ ಮೊದಲ ಗುರಿ ತಾಚ್ಚು ತಲುಪುವುದು. ಇದು ಸುಮಾರು ೧೪ ಕಿಲೋಮೀಟರ್. ನನ್ನ ಅನುಭವವೇನೆಂದರೆ ಒಬ್ಬ ಆರೋಗ್ಯಕರ ವ್ಯಕ್ತಿ ಒಂದು ಗಂಟೆಗೆ ಎರಡು ಕಿಲೋಮೀಟರ್ ಬೆಟ್ಟ ಹತ್ತಬಲ್ಲ. ತುಸು ಕಠಿಣವಾದ ರಸ್ತೆಯಾದರೆ ಒಂದು ಗಂಟೆಗೆ ಒಂದು ಕಿಲೋ ಮೀಟರ್. ಹಾಗಿರುವುದರಿಂದ ಸಾಯಂಕಾಲದ ವರೆಗೆ ತಾಚ್ಚು ತಲುಪುವುದು ತುಂಬಾ ದುಸ್ಸಾಧ್ಯವೇನಲ್ಲ. ಹಾಗೆ ಆಲೋಚಿಸಿ ಆರಾಮವಾಗಿಯೇ ಬೆಟ್ಟ ಹತ್ತಲು ಶುರುಮಾಡಿದೆವು. ಮೊದಲ ಎರಡು ಕಿಲೋಮೀಟರ್ ರಸ್ತೆ ಮನೋಹರ ಮತ್ತು ತಕ್ಕಮಟ್ಟಿಗೆ ಸುಲಭ. ಬಲಭಾಗದಲ್ಲಿ ಹರಿಯುತ್ತಿರುವ ನಿರ್ಮಲವಾದ ನದಿ ಮತ್ತು ಎಡಭಾಗದಲ್ಲಿ ಹಸಿರಿನಿಂದ ಕೂಡಿದ ಪರ್ವತ. ಸುಮಾರು ಒಂದೂವರೆ ಗಂಟೆ ನಡೆದಾದ ಮೇಲೆ ಒಂದು ಲಂಗರ್ ಕಾಣಿಸಿತು. ಅಲ್ಲಿ ಪರೋಠ ತಿಂದು ಚಹಾ ಕುಡಿದು ಮುಂದೆ ಹೊರಟೆವು. ಅಲ್ಲಿ ಮತ್ತೊಂದು ಕಡೆ ನಮ್ಮ ನೋಂದಣಿ ಪತ್ರವನ್ನು ಪರೀಕ್ಷಿಸಿ ಮುಂದೆ ಹೋಗಲು ಅನುವು ಮಾಡಿಕೊಡುತ್ತಾರೆ. ಇಲ್ಲಿಂದ ಮುಂದಕ್ಕೆ ರಸ್ತೆ ಕಠಿಣವಾಗುತ್ತಾ ಹೋಗುತ್ತದೆ.

ಹಾಗೆ ಮುಂದೆ ನಡೆಯುತ್ತಾ ಹೋದಂತೆ ಯಾತ್ರೆಯಿಂದ ವಾಪಸ್ ಬರುತ್ತಿರುವವರೊಂದಿಗೆ ತುಸು ಸಂವಾದ. ಕಿರಿ ವಯಸ್ಸಿನ ಯುವಕರಿಂದ ಹಿಡಿದು ವಯಸ್ಸಾದವರೆಲ್ಲರ ದರ್ಶನ. ದಾರಿಯಲ್ಲಿ ಕುಡಿಯುವ ನೀರಿಗೇನೂ ಕೊರತೆಯಿಲ್ಲ ಮತ್ತು ಅಲ್ಲಲ್ಲಿ ಚಿಕ್ಕ ಪುಟ್ಟ ಟೆಂಟ್‌ಗಳು. ಅಲ್ಲಿ ಲಘು ಉಪಹಾರ ಮತ್ತು ಪಾನೀಯಗಳು ದೊರೆಯುತ್ತವೆ. ಕೊಂಚ ದುಬಾರಿ ಎನ್ನಿಸಿದರೂ ಪರವಾಗಿಲ್ಲ. ಏಕೆಂದರೆ ಈ ರಸ್ತೆಯಲ್ಲಿ ಸಾಮಾನುಗಳನ್ನು ಸಾಗಿಸುವುದಕ್ಕೆ ಯಾವುದೇ ಕತ್ತೆ ಮತ್ತು ಕುದುರೆಗಳು ಇಲ್ಲ. ಎಲ್ಲವನ್ನೂ ಕೂಲಿಯವರೇ ಎತ್ತಿಕೊಂಡು ಹೋಗುವುದು. ನಿಜಕ್ಕೂ ಅವರ ಬಗ್ಗೆ ಯೋಚಿಸಿದರೆ ತುಂಬಾ ದುಃಖವೆನಿಸುತ್ತದೆ. ಆ ಕಠಿಣ ರಸ್ತೆಯಲ್ಲಿ ಅತ್ತಿತ್ತ ನೋಡದೆ ತಮ್ಮ ಪಾಡಿಗೆ ತಮ್ಮ ತಲೆಯ ಮೇಲೆ ಇರುವ ತೂಕದ ಭಾರವನ್ನು ಹೊತ್ತು ಸಾಗುವ ರೀತಿಯನ್ನು ನೋಡಿದರೆ



ನಮ್ಮ ಜೀವನ ಭಾರ ಬಹಳ ಕಡಿಮೆ ಎಂದೆನಿಸುವುದು. ಇದು ಹಿಮಾಲಯ ಪ್ರದೇಶವೇ ಆದರೂ ಆಗಾಗ ಹೆಚ್ಚಿನ ಬಿಸಿಲು ಕೂಡ ಇರುತ್ತದೆ. ಮೇಲಿನ ಬಿಸಿಲು ಮತ್ತು ನಡೆಯುತ್ತಿರುವಾಗ ದೇಹದ ಒಳಗಿಂದ ಬರುವ ಶಾಖ ಎರಡು ಸೇರಿ ನನಗಂತೂ ಮೂಗಿನಿಂದ ರಕ್ತವೇ ಬಂದುಬಿಟ್ಟಿತು. ನನಗಂತೂ ಅದರ ಪರಿವೆ ಇಲ್ಲ. ಮುಂದೆ ಇದ್ದ ಒಬ್ಬರು ಅದನ್ನು ಗುರುತಿಸಿ ಹೇಳಿದರು. ನನ್ನ ಮೈಮೇಲಿನ ಜಾಕೆಟ್ ತೆಗೆದು ಚೆನ್ನಾಗಿ ನೀರು ಕುಡಿಯಲು ಹೇಳಿದರು. ಅವರ ಸಲಹೆ ತುಂಬಾ ಸಹಕಾರಿಯಾಯಿತು. ಇಲ್ಲಿಯ ಚಾರಣ ಸಾಧಾರಣ ಎಲ್ಲ ಕಡೆ ಇರುವ ಬೆಟ್ಟಗಳ ಚಾರಣದಂತೆಯೇ ಇದೆ. ಆದರೆ ಒಂದು ವಿಶೇಷತೆಯೇನೆಂದರೆ ಹಿಮಾಲಯದ ಪರಿಸರ ತುಂಬಾ ಆಹ್ಲಾದಕಾರಿ. ರಸ್ತೆ ಎಷ್ಟೇ ಕಠಿಣವೆಂದೆನಿಸಿದರೂ, ಪ್ರಕೃತಿ ಸೌಂದರ್ಯ ಮತ್ತು ಹಿಮಾಲಯದ ವಾತಾವರಣದಲ್ಲಿರುವ ಒಂದು ರೀತಿಯ ಸಂಜೀವಿನಿ ಶಕ್ತಿ ನಮ್ಮನ್ನು ಪ್ರೇರೇಪಿಸಿ ಮುಂದಕ್ಕೆ ಕರೆದೊಯ್ಯುತ್ತವೆ. ಮಧ್ಯಾಹ್ನ ಒಂದು ಕಡೆ ವಿಶ್ರಮಿಸಿ ಅಲ್ಲಿಯೇ ಮ್ಯಾಗಿ ನೂಡಲ್ಸ್ ತಿಂದು ಮುಂದಕ್ಕೆ ಹೊರಟೆವು. ತಾಚ್ಚು ತಲುಪಿದಾಗ ಸುಮಾರು ಆರು ಗಂಟೆ. ಅಲ್ಲಿದ್ದ ಒಂದು ಲಂಗರಿನಲ್ಲಿ ಚಹಾ ಸೇವಿಸಿ ಒಂದು ಟೆಂಟ್‌ನಲ್ಲಿ ವಿಶ್ರಮಿಸಿದೆವು. ಇಲ್ಲಿ ಒಂದು ರಾತ್ರಿ ಉಳಿಯಲು ಮುನ್ನೂರು ರೂಪಾಯಿಗಳು. ಇಲ್ಲಿ ರಾತ್ರಿ ಹತ್ತು ಗಂಟೆಯವರೆಗೆ ಮೊಬೈಲ್ ಚಾರ್ಜ್ ಮಾಡಲು ಅವಕಾಶವಿತ್ತು. ತಕ್ಕ ಮಟ್ಟಿಗೆ ಚಾರ್ಜ್ ಮಾಡಿಕೊಂಡೆವು. ಲಂಗರಿನಲ್ಲಿಯೇ ರಾತ್ರಿಯ ಊಟ ಮಾಡಿ ಮಲಗಿದೆವು. ತಾಚ್ಚುವಿನಿಂದ ಶ್ರೀಖಂಡ್ ಮಹಾದೇವನನ್ನು ಅತ್ಯಂತ ದೂರದಿಂದ ದರ್ಶನ ಮಾಡಬಹುದು.

ನಮ್ಮ ಮುಂದಿನ ಗುರಿ ಭೀಮದ್ವಾರ ತಲುಪುವುದು. ಇದು ತಾಚ್ಚುವಿನಿಂದ ೧೦ ಕಿಲೋಮೀಟರ್ ಎಂದು ಹೇಳುತ್ತಾರಾದರೂ ಹೆಚ್ಚು ಕಡಿಮೆ ೧೪ ಕಿಲೋ ಮೀಟರ್ ದೂರದಲ್ಲಿದೆ. ಮೊದಲ ದಿನದ ಯಾತ್ರೆಗಿಂತ ಇದು ಹೆಚ್ಚು ಸುಂದರ ಮತ್ತು ತುಸು ಕಠಿಣ. ಹಿಮಾಲಯದ ಸೌಂದರ್ಯವನ್ನು ಬಾಯಿಂದ ವರ್ಣಿಸುವುದು ಅಸಾಧ್ಯ. ತಾಚ್ಚುವಿನಿಂದ ಮುಂದೆ ಹೊರಟಂತೆ ಹೆಚ್ಚು ಹುಲ್ಲುಗಾವಲು ಮತ್ತು ಇಲ್ಲಿಂದ ಮುಂದಕ್ಕೆ ಮರಗಳು ಕಡಿಮೆಯಾಗುತ್ತವೆ. ಸುತ್ತಲೂ ಹಚ್ಚ ಹಸಿರು, ಮಧ್ಯದಲ್ಲಿ ನಡೆಯಲು ಕಾಲುದಾರಿ ಮತ್ತು ನಿರ್ಮಲವಾದ ಗಗನ. ಹರಹರ ಮಹಾದೇವ ಎಂದು ಕೂಗಿದೊಡನೆಯೇ ಧ್ವನಿಯು ಅಲ್ಲಿ ಅನುರಣಿಸುತ್ತದೆ ಮತ್ತು ಮುಂದೆ ಹೋಗಲು ಹೆಚ್ಚಿನ ಪ್ರೇರಣೆಯನ್ನು ನೀಡುತ್ತದೆ. ಬಹುಶಃ ಈ ರಸ್ತೆಯೇ ಶ್ರೀಖಂಡ್ ಮಹದೇವ್ ಯಾತ್ರೆಯಲ್ಲಿ ತುಂಬಾ ಆನಂದವನ್ನು ನೀಡುವುದು. ಎಲ್ಲವನ್ನು ಬಿಟ್ಟು ಅಲ್ಲಿಯೇ ಇರೋಣವೆಂದು ಅನ್ನಿಸಿದ್ದು ಉಂಟು. ಹಾಗೆ ನಡೆಯುತ್ತಾ ಕಾಳಿ ಟಾಪ್ ತಲುಪಿದೆವು. ಇಲ್ಲಿ ಸ್ವಲ್ಪ ವಿಶ್ರಮಿಸಿ, ಕಾಳಿ ಮಾತೆಗೆ ವಂದಿಸಿ ಅಲ್ಲಿಂದ ಮುಂದೆ ಹೊರಟೆವು. ಇಲ್ಲಿಂದ ಮುಂದಿನ ರಸ್ತೆ ನಿಜಕ್ಕೂ ಕಠಿಣವಾದುದು. ಜೊತೆಗೆ ಮಳೆ ಬೇರೆ ಶುರುವಾಗಿಬಿಟ್ಟಿತು. ಮಳೆ ಬೀಳುವಾಗ ಕಾಲು ಜಾರುವ ಸಂಭವ ಅಧಿಕ. ಹಾಗೆಂದು ತುಂಬಾ ಹೊತ್ತು ನಿಲ್ಲುವುದಕ್ಕೂ ಆಗುವುದಿಲ್ಲ. ಛತ್ರಿ ಹಿಡಿದು ನಡೆಯುವುದು ಸುಲಭವಲ್ಲ ಮತ್ತು ಮಳೆ ಶುರುವಾದಾಗ ಹೆಚ್ಚಿನ ಮೋಡಗಳು ಕವಿದು ಬೆಳಕು ಬಹಳ ಕಡಿಮೆಯಾಗಿ ಬಿಡಬಹುದು. ಎಲ್ಲ ಕಡೆಯೂ ಬರಿಯ ಮಬ್ಬು. ಗಂಟೆ ಮಧ್ಯಾಹ್ನ ಎರಡಾದರೂ ಸಾಯಂಕಾಲ ಆರರ ಅನುಭವ. ದಾರಿಯಲ್ಲಿ ಸಾಕಷ್ಟು ಸಣ್ಣಪುಟ್ಟ ಜಲಪಾತಗಳು ಕಂಡು ಬರುತ್ತವೆ. ಒಂದು ಕಡೆಯಂತೂ ಹಿಮಗಟ್ಟಿರುವ ಜಲಪಾತದ ಮೇಲೆಯೇ ನಡೆಯಬೇಕು. ಸ್ವಲ್ಪ ಗಮನ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಇಲ್ಲಿ ನಮಗೆ ತಿಳಿದು ಬಂದ ಒಂದು ವಿಚಾರವೆಂದರೆ ಹಿಂದಿನ ದಿನ ಪ್ರಯಾಣಿಸಿದ ಒಂದು ಗುಂಪಿನಲ್ಲಿ ಒಬ್ಬ ಹುಡುಗ ಆಮ್ಲಜನಕದ ಕೊರತೆಯಿಂದಾಗಿ ಮೃತಪಟ್ಟನೆಂಬುದಾಗಿ. ದಾರಿಯಲ್ಲಿ ಅವನ ಶವವನ್ನು ಕೆಳಕ್ಕೆ ತರಲು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಇದೊಂದು ಕಷ್ಟಕರವಾದ ಯಾತ್ರೆಯೇ ಸರಿ. ಆದರೆ ಬೆಂಗಳೂರಿನ ರಸ್ತೆಗಳಲ್ಲೇನು ನಾವೇನು ಕ್ಷೇಮವೆ? ದುರ್ಘಟನೆಗಳು ಎಲ್ಲಿ ಬೇಕಾದರೂ ಸಂಭವಿಸಬಹುದು.

ಅಂತೂ ಇಂತೂ ಕಷ್ಟಪಟ್ಟು ಭೀಮದ್ವಾರದ ಹತ್ತಿರ ಬಂದಾಗ ಇದಕ್ಕಿದ್ದಂತೆ ಬಿಸಿಲು ಮತ್ತು ಸೂರ್ಯನ ದರ್ಶನ. ಇದಂತೂ ಒಂದು ಅದ್ಭುತ ಅನುಭವ. ಬೆಟ್ಟದ ಮೇಲೆ ನಿಂತು ಸುತ್ತಲೂ ಕಣ್ಣು ಹಾಯಿಸಿದಂತೆ ಕಣ್ಣಿಗೆ ಬಿದ್ದಿದ್ದು ಕಣಿವೆ ಪ್ರದೇಶ ಮತ್ತು ಅದರ ಆಚೆಗೆ ಬೆಟ್ಟಗಳು ಮತ್ತು ಅಲ್ಲಲ್ಲಿ ಜಲಪಾತಗಳು. ಆಗ ನೆನಪಿಗೆ ಬಂದು ಸಾಲುಗಳು ‘ಊಂಚೇ ಊಂಚೇ ಪರ್ವತ ಕೀನ್ಹೇ ಸರಿತಾ ನಿರ್ಮಲ ಧಾರಾ’. ನಿಜವಾಗಲೂ ಬ್ರಹ್ಮಾನಂದರು ಈ ರೀತಿಯ ಜಾಗಕ್ಕೆ ಬಂದಾಗಲೇ ‘ಪ್ರಭು ತೇರಿ ಮಹಿಮಾ ಪರಮ ಅಪಾರ’ ಹಾಡನ್ನು ಬರೆದಿರಬೇಕೆನಿಸುತ್ತದೆ. ಭೀಮದ್ವಾರ ಹತ್ತಿರದಲ್ಲೇ ಇದ್ದುದರಿಂದ ಇದೇ ಜಾಗದಲ್ಲಿ ಬಹಳ ಹೊತ್ತು ಕಳೆದು ಸಾಯಂಕಾಲ ಹತ್ತಿರವಾದಾಗ ಎದ್ದು ಭೀಮದ್ವಾರದ ಕಡೆಗೆ ಹೊರಟೆ. ಮುಂದೆ ಒಂದು ಚಿಕ್ಕ ಹೋಟೆಲ್‌ನಲ್ಲಿ ಮತ್ತೆ ಮ್ಯಾಗಿ ನೂಡಲ್ಸ್ ತಿಂದು ಚಹಾ ಕುಡಿದು ತುಸು ವಿಶ್ರಮಿಸಿ ಭೀಮದ್ವಾರ ತಲುಪಿದೆ. ಅಷ್ಟೊತ್ತಿಗೆ ನನ್ನ ಮಿತ್ರ ರಘು ಭೀಮದ್ವಾರ ತಲುಪಿ ಒಂದು ಟೆಂಟನ್ನು ಬುಕ್ ಮಾಡಿದ್ದರು. ಭೀಮದ್ವಾರದಲ್ಲಿಯೂ ಒಂದು ಲಂಗರ್ ಇತ್ತು. ಆದರೆ ನನಗೆ ಸಾಯಂಕಾಲದ ಉಪಾಹಾರವೇ ಸಾಕೆನಿಸಿ ಮತ್ತೆ ಊಟ ಮಾಡಲು ಹೋಗಲಿಲ್ಲ. ಈ ಟೆಂಟ್‌ನಲ್ಲಿ ಮಲಗಲು ತಕ್ಕ ಮಟ್ಟಿಗೆ ಉತ್ತಮ ವ್ಯವಸ್ಥೆ ಇತ್ತು. ಸಾಕಷ್ಟು ಚಳಿಯೂ ಇತ್ತು. ನಮ್ಮ ಮುಂದಿನ ದಿನದ ಕಠಿಣ ಪ್ರಯಾಣಕ್ಕೆ

ಮಾನಸಿಕವಾಗಿ ಸಿದ್ಧರಾಗುತ್ತಾ ನಮ್ಮ ಬ್ಯಾಗುಗಳನ್ನೇ ದಿಂಬಾಗಿ ಮಾಡಿಕೊಂಡು ಮಲಗಿದೆವು.

ಮೂರನೆಯ ದಿನದ ಯಾತ್ರೆಯೇ ತುಂಬಾ ದೀರ್ಘ ಮತ್ತು ಕಠಿಣವಾದುದು. ಕೆಲವು ವಿಡಿಯೋಗಳಲ್ಲಿ ನೋಡಿದಂತೆ ಮತ್ತು ನಮಗೆ ಸ್ವಾಮೀಜಿಯವರು ತಿಳಿಸಿದಂತೆಯೂ ಬೆಳಿಗ್ಗೆ ಮೂರು ಗಂಟೆಗೆ ನಾವು ಭೀಮದ್ವಾರ ಬಿಡಬೇಕಿತ್ತು ಇಲ್ಲದಿದ್ದರೆ ಅಂದಿನ ದಿನವೇ ನಾವು ವಾಪಸ್ ಬರುವುದು ಬಹಳ ಕಷ್ಟ ಮತ್ತು ಮೇಲೆ ಉಳಿಯಲು ಅವಕಾಶವೇ ಇಲ್ಲ. ಸುಮಾರು ಎರಡೂವರೆಗೆ ಎದ್ದು ತುಂಬಾ ಅವಶ್ಯವಿರುವ ಸಾಮಗ್ರಿಗಳನ್ನು ಮಾತ್ರ ತೆಗೆದುಕೊಂಡು ಒಂದು ಬ್ಯಾಗನ್ನು ಟೆಂಟ್‌ನಲ್ಲಿಯೇ ಬಿಟ್ಟು ಸುಮಾರು ಮೂರು ಕಾಲು ಗಂಟೆಗೆ ಟೆಂಟ್‌ನಿಂದ ಹೊರಟೆವು. ಎಲ್ಲೆಡೆ ಕತ್ತಲೆ. ನಮ್ಮ ಟಾರ್ಚ್ ಒಂದೇ ನಮಗೆ ಬೆಳಕು ನೀಡಲು ಇರುವುದು. ಈ ಕತ್ತಲೆಯಲ್ಲಿಯೇ ಬೆಟ್ಟ ಹತ್ತಬೇಕು ಮತ್ತು ಕೆಲವು ಸಣ್ಣಪುಟ್ಟ ಜಲಪಾತಗಳನ್ನೂ ದಾಟಬೇಕು. ನಾವು ಹೊರಟಾಗ ಹೆಚ್ಚು ಜನ ಕಾಣಿಸಲಿಲ್ಲ ಆದರೆ ಸುಮಾರು ನಾಲ್ಕೂವರೆ ಗಂಟೆಯ ಹೊತ್ತಿಗೆ ನಮ್ಮ ಹಿಂದೆ ನೂರಾರು ಟಾರ್ಚ್‌ಗಳು ಕಾಣಿಸಲಾರಂಭಿಸಿದವು. ಅಂದರೆ ನಾವೇ ಸ್ವಲ್ಪ ಬೇಗ ಹೊರಟಿದ್ದೆವು. ಇದು ತುಂಬಾ ಕಡಿದಾದ ಮಾರ್ಗ. ಕತ್ತಲೆ ಬೇರೆ. ಮುಂದೆ ಹೋದಂತೆ ಹೆಚ್ಚು ಹೆಚ್ಚು ಕಡಿದು. ನಾವು ತಲುಪಬೇಕಿದ್ದ ಮೊದಲನೇ ಸ್ಥಳ ಪಾರ್ವತೀ ಬಾಗ್. ಬೆಳಕು ಹರಿಯುವ ಹೊತ್ತಿಗೆ ನಾವು ಪಾರ್ವತಿ ಬಾಗ್ ತಲುಪಿ ಅಲ್ಲಿಯೇ ನೂಡಲ್ಸ್ ತಿಂದು ಚಹಾ ಕುಡಿದೆವು. ಇಲ್ಲಿಂದ ಮುಂದೆ ಯಾವುದೇ ಹೋಟೆಲ್‌ಗಳು ಇಲ್ಲ ಮತ್ತು ಸ್ವಲ್ಪ ದೂರದ ನಂತರ ಕುಡಿಯಲು ನೀರು ಕೂಡ ದೊರಕುವುದಿಲ್ಲ. ಎರಡು ಬಾಟಲ್‌ಗಳಲ್ಲಿ ನೀರನ್ನು ಒಯ್ದು ತಿನ್ನಲು ಸ್ವಲ್ಪ ಡ್ರೈ ಫ್ರೂಟ್ಸ್ ತೆಗೆದುಕೊಂಡು ಹೊರಟೆವು. ಇಲ್ಲಿಯ ಮೊದಲ ಹಂತ ಕಲ್ಲಿನ ಮಾರ್ಗ. ದೊಡ್ಡ ದೊಡ್ಡ ಕಲ್ಲುಗಳ ಮೇಲೆಯೇ ನಡೆಯಬೇಕು ಮತ್ತು ಜಾಗ್ರತೆ ತಪ್ಪುವ ಮಾತು ಇಲ್ಲವೇ ಇಲ್ಲ. ಯಾರಿಗಾದರೂ ಏಕಾಗ್ರತೆಯ ಕೊರತೆಯಿದ್ದರೆ ಇಲ್ಲಿಗೆ ಬಂದರೆ ಅದು ಬಹುಶಃ ಸರಿ ಹೋಗುತ್ತದೆ. ಇದೂ ಸಹ ಬಹು ಕಷ್ಟಕರವಾದ ಮಾರ್ಗ. ಸುಮಾರು ಮೂರು ಗಂಟೆಗಳ ಕಾಲ ನಡೆದು ನೈನ್ ಸರೋವರ ತಲುಪಿದೆವು. ಇಲ್ಲಿಂದ ಮುಂದಕ್ಕೆ ಕುಡಿಯುವ ನೀರು ಸಿಗುವುದಿಲ್ಲ ಮತ್ತು ೮೦ ಡಿಗ್ರಿಯಲ್ಲಿರುವ ಬೆಟ್ಟವನ್ನು ಹತ್ತಬೇಕು. ನಮ್ಮ ಮುಂದೆ ಈಗ ಇರುವುದು ಈ ಯಾತ್ರೆಯ ಕಡೆಯ ಹಂತದ ಮತ್ತು ತುಂಬಾ ಕಠಿಣವಾಗಿರುವ ರಸ್ತೆ. ಬಹಳಷ್ಟು ಜನ ಇಲ್ಲಿಂದ ವಾಪಸ್ ಬಂದುಬಿಡುತ್ತಾರೆ.

ನನಗೆ ಈ ರಸ್ತೆ ದುರ್ಗಮವಾದುದೆಂದು ತಿಳಿದಿತ್ತು. ನನ್ನ ದೇಹ ಮತ್ತು ಮನಸ್ಸಿಗೆ ನಾನು ನೀಡಿದ್ದ ಒಂದೇ ಒಂದು ಸೂಚನೆಯೆಂದರೆ ಮುಂದಿನ ಒಂದು ಹೆಜ್ಜೆಯ ಬಗ್ಗೆ ಮಾತ್ರ ಗಮನವಿರಲೆಂದು. ಇದನ್ನೇ ಅಕ್ಷರಶಃ ಪಾಲಿಸಿದೆ. ಹೆಚ್ಚು ತೊಂದರೆ ಏನು ಆಗಲಿಲ್ಲ. ಈ ಮಾರ್ಗದಲ್ಲೂ ಸಾಕಷ್ಟು ದೊಡ್ಡ ದೊಡ್ಡ ಕಲ್ಲುಗಳ ಮೇಲೆ ಹತ್ತಬೇಕು. ಕೋರೋನ ನಂತರ ಯಾವುದೇ ಚಾರಣ



ಮಾಡದಿದ್ದರಿಂದ ಮತ್ತು ಕಾಲ್ನಡಿಗೆಯನ್ನೂ ಕೂಡ ಸ್ವಲ್ಪ ಕಡಿಮೆ ಮಾಡಿದ್ದರಿಂದ ಇಲ್ಲಿ ಹತ್ತುವುದು ಸ್ವಲ್ಪ ಕಷ್ಟವೇ ಆಯಿತು. ಆದರೂ ಮೊದಲೇ ಯೋಚಿಸಿದ್ದಂತೆ ಮುಂದಿನ ಒಂದು ಹೆಜ್ಜೆಯ ಬಗ್ಗೆ ಮಾತ್ರ ಗಮನವಿರಿಸಿ ಅಲ್ಲಲ್ಲಿ ವಿಶ್ರಮಿಸಿ ಮುಂದಕ್ಕೆ ಹೊರಟೆ. ಮಳೆ ಶುರುವಾಗಿಬಿಟ್ಟಿತು. ಒಂದು ಕೈಯಲ್ಲಿ ಕೊಡೆಯನ್ನು ಹಿಡಿದು ಇನ್ನೊಂದು ಕೈಯಲ್ಲಿ ಕೋಲನ್ನು ಹಿಡಿದು ಕಡಿದಾದ ಬೆಟ್ಟ ಹತ್ತುವುದು ಒಂದು ಸಾಹಸವೇ ಸರಿ. ನನ್ನ ಸ್ನೇಹಿತ ರಘುರವರು ಕೋಲನ್ನು ಅಲ್ಲಿಯೇ ಬಿಟ್ಟುಬಿಟ್ಟರು. ನಾನು ಕೋಲನ್ನು ಹಿಡಿದು ಹೊರಟೆನಾದರೂ ಒಂದು ದೊಡ್ಡ ಕಲ್ಲನ್ನು ದಾಟುವಾಗ ಕೋಲು ಕೈಜಾರಿ ಸ್ವಲ್ಪ ಕೆಳಗೆ ಹೋಗಿಬಿಟ್ಟಿತು. ಆದದ್ದೆಲ್ಲ ಒಳ್ಳೆಯದಕ್ಕೆ ಆಯಿತೆಂದು ಮುಂದಕ್ಕೆ ಹೊರಟೆವು. ಇಲ್ಲಿ ಸಾಕಷ್ಟು ಜನ ಮುಂದೆ ಬರಲು ಹಿಂದೇಟು ಹಾಕಿ ವಾಪಸ್ ಹೊರಟುಬಿಟ್ಟರು. ಇಲ್ಲಿಯವರೆಗೂ ನಾನು ಶಾಂತಚಿತ್ತನಾಗಿಯೂ ವಿಶ್ವಾಸದಿಂದಲೇ ಇದ್ದೆ. ಮುಂದೆ ಗಟ್ಟಿಯಾಗಿದ್ದ ಹಿಮದ ಮೇಲೆ ಸ್ವಲ್ಪ ನಡೆಯಬೇಕಿತ್ತು. ಅತಿಯಾದ ವಿಶ್ವಾಸ ಮತ್ತು ಸ್ವಲ್ಪ ಅಜಾಗರೂಕತೆಯಿಂದಾಗಿ ಅಲ್ಲಿ ನನ್ನ ಕಾಲು ಜಾರಿಬಿಟ್ಟಿತು. ಸಂಪೂರ್ಣ ದೇಹ ಹಿಮದ ಮೇಲೆ ಬಂದುಬಿಟ್ಟಿತು ಮತ್ತು ಕೆಳಗೆ ಜಾರಿ ಹೋಗುವ ಸಂಭವ ಅಧಿಕ. ಪುಣ್ಯಕ್ಕೆ ಹಿಮ ಗಟ್ಟಿಯಾಗಿದ್ದರಿಂದ ಅದರ ಅಂಚು ಸ್ವಲ್ಪ ಹಿಡಿತವನ್ನು ನೀಡಿತು. ದೇವರ ಕೃಪೆಯಿಂದ ಹೆಚ್ಚು ಗಾಬರಿಗೊಳ್ಳದೆ ಸ್ವಲ್ಪ ಮುಂದೆ ಹೋಗಿದ್ದ ರಘುರವರನ್ನು ಕೂಗಿ ಕರೆದೆ. ಅವರ ಮತ್ತು ಇನ್ನೊಬ್ಬ ಯಾತ್ರಿಕರ ಸಹಾಯದಿಂದ ಹಿಮದಿಂದ ಆಚೆಗೆ ಬಂದೆ. ಮುಂದೆ ನಾವಿಬ್ಬರೂ ಇದರ ಬಗ್ಗೆ ಮಾತನಾಡದಿದ್ದರೂ ಎದೆಯಲ್ಲಿ



ಇಬ್ಬರಿಗೂ ಢವ ಢವ. ಅಲ್ಲಿ ಏನೂ ಬೇಕಾದರೂ ಆಗಬಹುದಿತ್ತು! ಈ ಘಟನೆ ನಡೆದಾಗ ಯಾತ್ರೆಯ ಸುಮಾರು ೯೦ ಭಾಗವನ್ನು ನಾವು ಯಾವುದೇ ರೀತಿಯ ತೊಂದರೆಯಿಲ್ಲದೆ ಕ್ರಮಿಸಿದ್ದೆವು. ಈ ಘಟನೆ ನಮ್ಮಿಬ್ಬರಿಗೂ ಸ್ವಲ್ಪ ವಿಶ್ವಾಸವನ್ನು ಕದಲಿಸಿಬಿಟ್ಟಿತು. ಆದರೆ ಇಂತಹ ಘಟನೆಗಳಿಗೂ ಮಾನಸಿಕವಾಗಿ ಮೊದಲೇ ಸಿದ್ಧರಾಗಿದ್ದ ರಿಂದ ಸಂಪೂರ್ಣ ಧೃತಿಗೆಡದೆ ಮುಂದೆ ಹೊರಟೆವು.

ಇದ್ದಕ್ಕಿದ್ದಂತೆ ಸುಮಾರು ಒಂದು ಕಿಲೋಮೀಟರ್‌ನಷ್ಟು ದೂರದ ಹಿಮರಾಶಿ ಕಣ್ಣು ಮುಂದೆ ಬಂದುಬಿಟ್ಟಿತು. ಇದು ಶ್ರೀಖಂಡ್ ಮಹಾದೇವನನ್ನು ತಲುಪಲು ದಾಟಬೇಕಿದ್ದ ಕೊನೆಯ ತೊಡಕು. ಈ ಯಾತ್ರೆಯಲ್ಲಿ ನನಗೆ ಮೊದಲಿಂದಲೂ ಸ್ವಲ್ಪ ಅಳುಕಿದ್ದುದು ಈ ಭಾಗವೇ. ಹಿಂದಿನ ದಿನದವರೆಗೂ ಅಲ್ಲಿ ಹಿಮ ಸೇರಿರಲಿಲ್ಲ. ಆದರೆ ಇಂದಿನ ಮೋಡ ಮತ್ತು ಮಳೆಯಿಂದಾಗಿ ಚೆನ್ನಾಗಿ ಹಿಮ ಬಿದ್ದು ಶೇಖರಣೆಯಾಗಿಬಿಟ್ಟಿತ್ತು. ಸ್ವಲ್ಪ ಹೊತ್ತಿಗಿಂತ ಮುಂಚೆ ಹಿಮದ ಮೇಲೆ ಬಿದ್ದಿದ್ದ ನೆನಪು ಇನ್ನೂ ಮಾಸಿರಲಿಲ್ಲ. ಕಷ್ಟ ಪಟ್ಟು ಸ್ವಲ್ಪ ದೂರ ನಡೆದೆವು ಆದರೆ ಕಾಲು ತುಂಬಾ ಜಾರಲಾರಂಭಿಸಿತು ಮತ್ತು ಆ ಮಂಜಿನ ಮಬ್ಬಿನಲ್ಲಿ ನೋಡಿದಷ್ಟು ದೂರವೂ ಬರಿಯ ಹಿಮವೇ. ರಘುರವರು ವಾಪಸ್ ಹೋಗಿ ಬಿಡೋಣವೇ ಎಂದರು. ಬೇಡ ಒಂದು ಐದು ನಿಮಿಷ ನೋಡೋಣ ಎಂದೆ. ಹಾಗೆ ನಿಂತು ನೋಡುತ್ತಿರುವಾಗ ನನ್ನ ಹಿಂದೆ ಸುಮಾರು ೬೦ ವರ್ಷ ವಯಸ್ಸಿನ ವೃದ್ಧರೊಬ್ಬರು ನಿಧಾನವಾಗಿ ಒಂದೊಂದೇ ಧೃಢವಾದ ಹೆಜ್ಜೆಯಿಟ್ಟು ಬರುತ್ತಿರುವುದು ಕಾಣಿಸಿತು. ಮುಂದೆ ಏನು ಮಾಡಬೇಕೆಂದು ಅರ್ಥವಾಯಿತು. ನಿಧಾನವಾಗಿ ಧೃಢವಾಗಿ ಒಂದೊಂದೇ ಹೆಜ್ಜೆಯಿಡಲು ಶುರುಮಾಡಿದೆ. ಒಂದು ಬಾರಿ ಜಾರಿದೆನಾದರೂ ಸಂಪೂರ್ಣ ಧೈರ್ಯ ಬಂದುಬಿಟ್ಟಿತ್ತು. 'ಧೈರ್ಯಂ ಸರ್ವತ್ರ ಸಾಧನಂ' ಎಂಬುದು ಎಷ್ಟು ನಿಜ! ಹಾಗೆ ಮುನ್ನಡೆದಂತೆ ದೊಡ್ಡ ದೊಡ್ಡ ಕಪ್ಪು ಕಲ್ಲುಗಳು ಕಂಡುಬಂದವು. ಇವು ಮಹಾಭಾರತ ಕಾಲದಲ್ಲಿ ಸ್ವರ್ಗಕ್ಕೆ ಹೋಗಲು ಮೆಟ್ಟಿಲುಗಳನ್ನು ಮಾಡಲು ಭೀಮನು ಹಾಕಿದ ಕಲ್ಲುಗಳೆಂದು ಹೇಳುತ್ತಾರೆ. ನಿಜವಾಗಿಯೂ ಅಷ್ಟು ಎತ್ತರದಲ್ಲಿ ಆ ರೀತಿಯ ಕಲ್ಲುಗಳು ಕಾಣುವುದು ಒಂದು ಅಚ್ಚರಿಯ ಮಾತೇ ಸರಿ.

ಅಷ್ಟು ಹೊತ್ತಿಗೆ ಶ್ರೀಖಂಡ್ ಮಹಾದೇವನ ಹತ್ತಿರ ಬಂದಿದ್ದ ರಿಂದ ಬೇರೆ ವಿಚಾರಗಳಿಗೆ ಮನಸ್ಸು ಹೋಗಲಿಲ್ಲ. ಹೊಸ ಚೈತನ್ಯ ಬಂದುಬಿಟ್ಟಿತ್ತು ಮತ್ತು ಎಲ್ಲ ಕರ್ಮಗಳ ಭಾರವು ಇಳಿದು ಹೋಯಿತೇನೋ ಎಂಬಷ್ಟು ನಿರಾಳ ಭಾವ. ಮೂರು ದಿನಗಳ ಶ್ರಮ ಸಂಪೂರ್ಣ ಮರೆತು ಹೋಯಿತು. ಶ್ರೀಖಂಡ್ ಮಹಾದೇವನ ಎದುರಿಗೆ ನಿಂತಾಗ ಸಾಕ್ಷಾತ್ ದೇವರ ದರ್ಶನವೇ ಆದಂತೆ ಭಾಸವಾಯಿತು. ಆ ಅನುಭವ ಮತ್ತು ಉಂಟಾದ ಭಾವನೆಯನ್ನು ಪದಗಳಲ್ಲಿ ಹೇಳುವುದು ಅಸಾಧ್ಯ. ಅದೊಂದು ಜೀವನಪರ್ಯಂತ ನೆನಪಿಡುವಂತಹ ಒಂದು ಅದ್ಭುತ ಕ್ಷಣ. ಸ್ವಲ್ಪ ಹೊತ್ತಿನ ಹಿಂದೆ ಕಾಲುಜಾರಿ ಬಿದ್ದಾಗ ಮಹಾದೇವನ ಮೇಲಿದ್ದ ವಿಶ್ವಾಸ ಕಡಿಮೆಯಾಗಿದ್ದನ್ನು ನೆನೆದು ಮತ್ತೆ ದರ್ಶನಭಾಗ್ಯವನ್ನು ನೀಡಿದ್ದಕ್ಕಾಗಿ ಮನಸ್ಸಿನಲ್ಲೇ ಒಂದು ನೆಮ್ಮದಿಯ ಭಾವ. ಕೆಳಗಿದ್ದ ಚಿಕ್ಕ ಲಿಂಗವೊಂದಕ್ಕೆ ಜಲ ಮತ್ತು ಜೇನುತುಪ್ಪದ ಅಭಿಷೇಕ ಮಾಡಿ, ರುದ್ರ ಮಂತ್ರವನ್ನು ಪಠಿಸಿದೆವು. ಇಲ್ಲಿಯತನಕ ಸೇರಲು ಮಾಡಿದ ಕಠಿಣ ಪ್ರಯತ್ನ ಮತ್ತು ನಮ್ಮ ಅಜಾಗರೂಕತೆ ಮತ್ತು ಭಕ್ತಿಯ ಕೊರತೆಯಿದ್ದರೂ ಮಹಾದೇವನು ದರ್ಶನವನ್ನು ನೀಡಿದ್ದನ್ನು ನೆನೆದು ಕಣ್ಣಿನಲ್ಲಿ ನೀರೇ ಬಂದುಬಿಟ್ಟಿತು. ನಾವು ಅಲ್ಲಿಗೆ ತಲುಪಿದಾಗ ಮೋಡ ಮತ್ತು ಮಂಜಿನಿಂದ ಶ್ರೀಖಂಡ್ ಮಹಾದೇವನ ದರ್ಶನ ಅಷ್ಟು ಚೆನ್ನಾಗಿ ಆಗಿರಲಿಲ್ಲ. ಆದರೆ ನನಗೆ ಮನಸ್ಸಿನಲ್ಲಿ ಧೃಢ ವಿಶ್ವಾಸವಿತ್ತು ಬಿಸಿಲು ಬರುವುದೆಂದು. ರಘುರವರು ವಾಪಸ್ ಹೋಗೋಣವೆಂದಾಗ ಬೇಡ ಸ್ವಲ್ಪ ಕಾಯೋಣವೆಂದೆ. ಹಾಗೆಯೇ ಬಿಸಿಲು ಬಂದುಬಿಟ್ಟಿತು. ಆ ಬೆಳಕಿನಲ್ಲಿ ಶ್ರೀಖಂಡ್ ಮಹಾದೇವನನ್ನು ಮನ ತೃಪ್ತಿಯಾಗುವಷ್ಟು ನೋಡಿ ಸುಮಾರು ಮೂರೂವರೆ ಗಂಟೆಗೆ ಅಲ್ಲಿಂದ ವಾಪಸ್ ಹೊರಟೆವು. ವಾಪಸ್ ಬರುವಾಗ ಒಂದು ರೀತಿಯ ಶಾಂತಿ ಮತ್ತು ಸಾರ್ಥಕ್ಯದ ಭಾವ. ಹಿಮದ ಮೇಲೆ ಸ್ವಲ್ಪ ದೂರ ಸ್ವಯಂಪ್ರೇರಿತನಾಗಿ ಈ ಬಾರಿ ನಾನೇ ಜಾರಿಕೊಂಡು ಬಂದೆ. ದೇವರ ಕೃಪೆಯಿದೆ ಎಂದು ತಿಳಿದಾದ ಮೇಲೆ ಈ ಹಿಮದ್ದೇನು ಭಯ?

ಕಡಿದಾದ ಬೆಟ್ಟಗಳಿಂದ ಇಳಿಯುವುದು ಕೂಡ ಒಂದು ಸಾಹಸವೇ. ಆದರೇ ಶಿವನ ದರ್ಶನವಾದ ಮೇಲೆ ಅವೆಲ್ಲ ನಗಣ್ಯ. ಸುಮಾರು ಐದು ಗಂಟೆಗಳ ಕಾಲ ಇಳಿದು ಪಾರ್ವತಿ ಬಾಗ್ ತಲುಪಿದೆವು. ರಾತ್ರಿಯನ್ನು ಅಲ್ಲಿಯೇ ಒಂದು ಟೆಂಟ್‌ನಲ್ಲಿ ಕಳೆದು ಬೆಳಿಗ್ಗೆ ಅಲ್ಲಿಂದ ಹೊರಟು ರಾತ್ರಿ ಕತ್ತಲಾಗುವ ವೇಳೆಗೆ ತಾಚ್ಚು ತಲುಪಿದೆವು. ಆ ರಾತ್ರಿ ತಾಚ್ಚುವಿನಲ್ಲಿ ಕಳೆದು ಮುಂದಿನ ದಿನ ರಾಮಪುರ ತಲುಪಿ ಆ ರಾತ್ರಿಯೇ ಅಲ್ಲಿಂದ ಹೊರಟು ರಾತ್ರಿ ಸುಮಾರು ಎರಡೂವರೆಯ ಹೊತ್ತಿಗೆ ಶಿಮ್ಲಾದ ರಾಮಕೃಷ್ಣ ಮಠ ತಲುಪಿದೆವು. ಅಷ್ಟರ ಹೊತ್ತಿಗೆ ನನಗೆ ಜ್ವರ ಬಂದುಬಿಟ್ಟಿತ್ತು. ಮುಂದಿನ ದಿನ ಅಲ್ಲಿಯೇ ವಿಶ್ರಮಿಸಿ ನಂತರ ಶಿಮ್ಲಾದ ಜಗತ್ ಪ್ರಸಿದ್ಧ ಚಿಕ್ಕ ರೈಲಿನಲ್ಲಿ ಚಂಡೀಗಢ ತಲುಪಿ ಅಲ್ಲಿ ಹತ್ತಿರದಲ್ಲಿದ್ದ ಚಂಡೀದೇವಿಯ ಮಂದಿರದಲ್ಲಿ ನಮನಗಳನ್ನು ಸಲ್ಲಿಸಿ ರಾತ್ರಿ ಚಂಡೀಗಢ ರಾಮಕೃಷ್ಣ ಮಿಷನ್ ತಲುಪಿದೆವು. ಮುಂದಿನ ದಿನ ಅಲ್ಲಿಯ ಸ್ವಾಮೀಜಿಯವರ ಜೊತೆಯಲ್ಲಿ ಅಲ್ಲಿನ ಮಾನಸ ದೇವಿ ದೇವಸ್ಥಾನದಲ್ಲಿ ದರ್ಶನ ಪಡೆದು ಅಂದಿನ ದಿನವೇ ವಾಯು ಮಾರ್ಗದ ಮೂಲಕ ಬೆಂಗಳೂರು ತಲುಪಿದೆವು. ಇಲ್ಲಿಗೆ ನಮ್ಮ ಹತ್ತು ದಿನಗಳ ತೀರ್ಥ ಯಾತ್ರೆ ದೇವರ ಕೃಪೆಯಿಂದ ನಾವು ಅಂದುಕೊಂಡದ್ದಕ್ಕಿಂತ ಚೆನ್ನಾಗಿಯೇ ಆಯಿತು. ಸುಮಾರು ಎರಡು ಮೂರು ವಾರಗಳ ಕನಸ್ಸಿನಲ್ಲೆಲ್ಲ ಶ್ರೀಖಂಡ್ ಮಹಾದೇವ ಯಾತ್ರೆಯದ್ದೇ ಕನಸು. ನಿಜವಾಗಿಯೂ ಇದೊಂದು ಸಾಹಸಮಯ ಯಾತ್ರೆಯೇ ಆಗಿತ್ತು. ದೇಹ ಒಂದು ರೀತಿ ಜರ್ಝರಿತವೆಂದೆನಿಸಿದರೂ ಅಲ್ಲಿ ದೊರೆತ ಆಧ್ಯಾತ್ಮಿಕ ಅನುಭವ ಜನ್ಮಜನ್ಮಕ್ಕೂ ಸಾರ್ಥಕ ಭಾವನೆಯನ್ನು ನೀಡುವುದು ಶತಸಿದ್ಧ. ಕೊನೆಯ ಒಂದು ಕಿವಿ ಮಾತು – ದೈಹಿಕ ಮತ್ತು ಮಾನಸಿಕವಾಗಿ ತಯಾರಿಲ್ಲದಿದ್ದರೆ ಈ ಯಾತ್ರೆಯನ್ನು ಕೈಗೊಳ್ಳಬೇಡಿ. ಆದರೆ ಇದೊಂದು ಅತ್ಯದ್ಭುತ ಅನುಭವವನ್ನು ಕೊಡುವ ಯಾತ್ರೆ. ಭಗವಂತನ ಕೃಪೆಯನ್ನು ನಂಬಿಕೊಂಡು ಮಾತ್ರ ಈ ಯಾತ್ರೆಯನ್ನು ಪೂರೈಸಬಹುದು. ✽